**ಸಾಕ್ಷಿಗೆ ದಿನಾಂಕ *10-03-2026* ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ *5* ನೇ ಪ್ರತಿವಾದಿಯ ಪರ ಶ್ರೀ ಎಮ್ ಬಿ ಡಿ. ವಕೀಲರಿಂದಃ**

ನಮ ಮನೆತನದ ಮೂಲ ಪುರುಷನ ಹೆಸರು ದ್ಯಾವಪ್ಪ ಎಂದು ಇರುತ್ತದೆ. ದ್ಯಾವಪ್ಪ ರವರ ಹೆಂಡತಿಯ ಹೆಸರು ಯಲ್ಲವ್ವ. ದ್ಯಾವಪ್ಪ ಮತ್ತು ಯಲ್ಲವ್ವ ರವರಿಗೆ 3 ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು. ಗಂಡುಮಕ್ಕಳಲ್ಲಿ ಯಮನಪ್ಪ ಮತ್ತು ಶಿವಶಂಕ್ರಪ್ಪ ರವರು ತೀರಿಕೊಂಡಿರುತ್ತಾರೆ. ಯಮನಪ್ಪ ರವರ ಹೆಂಡತಿಯ ಹೆಸರು ನಿಂಬವ್ವ ಮತ್ತು ಮಗನ ಹೆಸರು ದ್ಯಾವಪ್ಪ. ಶಿವಶಂಕ್ರಪ್ಪ ರವರ ಹೆಂಡತಿಯ ಹೆಸರು ನೀಲವ್ವ ಮತ್ತು ಮಕ್ಕಳ ಹೆಸರು ಮಲ್ಲಿಕಾರ್ಜುನ ಮತ್ತು ಬಸವರಾಜ. ಶಿವಗಂಗವ್ವ ನನ್ನ ಹೆಂಡತಿ ಎಂದರೆ ಸರಿ. ಶಿವಶಂಕರ ನನ್ನ ಮಗ. ಶಿವಗಂಗವ್ವ ರವರನ್ನು ಬಿಟ್ಟು ನಾನುಯಾರನ್ನೂ ಮದುವೆ ಆಗಿರುವುದಿಲ್ಲ ಎಂದರೆ ಸಾಕ್ಷಿದಾರರು ಸಾಬವ್ವ ಚಲವಾದಿ ಯವರು ನನ್ನ ಮೊದಲನೇ ಹೆಂಡತಿ ಆಗಿದ್ದು, ಮತ್ತು ಶಿವಗಂಗವ್ವ ರವರು ನನ್ನ ಎರಡನೇ ಹೆಂಡತಿ ಎಂದು ಹೇಳುತ್ತಾರೆ. ಸಾಬವ್ವ ಚಲವಾದಿಯವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಸಾಬವ್ವ ಚಲವಾದಿಯವರನ್ನು ಏಕೆ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಅವರು ಬೇರೆ ಸಮಾಜದವರು ಆಗಿದ್ದರಿಂದ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ಸಾಬವ್ವ ಚಲವಾದಿಯವರನ್ನು 1989 ರಲ್ಲಿ ಮದುವೆ ಆಗಿರುತ್ತೇನೆ. ನಾನು ಸಾಬವ್ವ ಚಲವಾದಿಯವರನ್ನು ಮದುವೆ ಆಗಿರುತ್ತೇನೆ ಎಂದು ತೋರಿಸಲು ಯಾವುದಾದರೂ ದಾಖಲೆಗಳನ್ನು ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ನಾನು ನನ್ನ ಅಕ್ಕ ಹೇಳಿದ ಹಾಗೆ ದೇವಸ್ಥಾನದಲ್ಲಿ ಮದುವೆ ಆಗಿದ್ದು, ಮದುವೆಯ ಕಾರ್ಡ ಇರುವುದಿಲ್ಲ ಮತ್ತು ಪೋಟೋ ಹುಡುಕಾಡಿದರೆ ಸಿಗಬಹುದು ಎಂದು ಹೇಳುತ್ತಾರೆ. ಬಿಸಲದಿನ್ನಿ ಗ್ರಾಮದ ಮರಿಗಾಂಬಾ ದೇವಸ್ಥಾನದಲ್ಲಿ ಮದುವೆ ಆಗಿರುತ್ತದೆ. ನನ್ನ ಪರವಾಗಿ ನನ್ನ ಅಕ್ಕಳಾದ 7 ನೇ ಪ್ರತಿವಾದಿ ಮತ್ತು ನಮ್ಮ ಅಣ್ಣ ಶಿವಶಂಕ್ರಪ್ಪ ಮತ್ತು ಗ್ಯಾನಪ್ಪ ರವರು ಇದ್ದರು. ಆ ಪೋಟೋಗಳನ್ನು ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿದಾರರು ಪೋಟೋ ಮನೆಯಲ್ಲಿ ಇದ್ದರೆ ಹಾಜರು ಪಡಿಸುತ್ತೇನೆ ಎಂದು ಹೇಳುತ್ತಾರೆ. ನಾನು 1989 ರಲ್ಲಿ ಸಾಬವ್ವ ಚಲವಾದಿಯವರನ್ನು ಮದುವೆ ಆಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮದುವೆಯು ಬಿಸಲದಿನ್ನಿ ಗ್ರಾಮದ ಮರಿಗಾಂಬಾ ದೇವಸ್ಥಾನದಲ್ಲಿ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಅಕ್ಕ ಮತ್ತು ಅಣ್ಣಂದಿರು

ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯನ್ನು ಮಾಡಲು ನಾನು ಮಾಹಿತಿ ನೀಡಿರುತ್ತೇನೆ. ನನ್ನ ವಾದ ಪತ್ರದಲ್ಲಿ ಸಾಬವ್ವ ಚಲವಾದಿಯವರನ್ನು ಮದುವೆ ಆಗಿರುತ್ತೇನೆ ಎಂದು ಹೇಳಿ ಬರೆಸಿರುವುದಿಲ್ಲ. ಸಾಬವ್ವ ರವರಿಗೆ 3 ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ಆ ಮೂರು ಮಕ್ಕಳು ನನ್ನ ಮಕ್ಕಳು ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ಮೊದಲನೇ ಮಗು ಬಿಸಲದಿನ್ನಿ ಗ್ರಾಮದಲ್ಲಿ1991 ರಲ್ಲಿ ಹುಟ್ಟಿರುತ್ತದೆ. ಮೊದಲನೇ ಮಗಳ ಹೆಸರು ಶೋಭಾ ಮತ್ತು ಅವಳು ಶಾಲೆ ಕಲಿತಿರುತ್ತಾಳೆ. ಶೋಭಾಳ ಶಾಲಾ ದಾಖಲಾತಿಯಲ್ಲಿ ನನ್ನ ಹೆಸರು ಇರುವುದಿಲ್ಲ. ಅವಳ ಅಡ್ಡ ಹೆಸರಿನ ಕಾಲಂ ನಲ್ಲಿ ನನ್ನ ಅಡ್ಡ ಹೆಸರು ಇರುವುದಿಲ್ಲ. 2 ನೇ ಮಗುವಿನ ಹೆಸರು ಪರಶುರಾಮ ಎಂದು ಇದ್ದು, ಅವನು ಕೂಡ ಬಿಸಲದಿನ್ನಿ ಗ್ರಾಮದಲ್ಲಿ ಜನಿಸಿರುತ್ತಾನೆ. ಪರಶುರಾಮ ರವರು ಕೂಡ ಶಾಲೆ ಕಲಿತಿರುತ್ತಾರೆ. ಪರಶುರಾಮ ರವರ ಶಾಲಾ ದಾಖಲಾತಿಯಲ್ಲಿ ನನ್ನ ಹೆಸರು ಇರುವುದಿಲ್ಲ. ಅವನ ಅಡ್ಡ ಹೆಸರಿನ ಕಾಲಂ ನಲ್ಲಿ ನನ್ನ ಅಡ್ಡ ಹೆಸರು ಇರುವುದಿಲ್ಲ. 3 ನೇ ಮಗುವಿನ ಹೆಸರು ಕಮಲಾಕ್ಷಿ ಎಂದು ಇದ್ದು, ಅವಳು ಕೂಡ ಬಿಸಲದಿನ್ನಿ ಗ್ರಾಮದಲ್ಲಿ ಜನಿಸಿರುತ್ತಾಳೆ. ಕಮಲಾಕ್ಷಿ ಕೂಡ ಶಾಲೆ ಕಲಿತಿರುತ್ತಾಳೆ. ಕಮಲಾಕ್ಷಿ ರವರ ಶಾಲಾ ದಾಖಲಾತಿಯಲ್ಲಿ ನನ್ನ ಹೆಸರು ಇರುವುದಿಲ್ಲ. ಅವಳ ಅಡ್ಡ ಹೆಸರಿನ ಕಾಲಂ ನಲ್ಲಿ ನನ್ನ ಅಡ್ಡ ಹೆಸರು ಇರುವುದಿಲ್ಲ. ಈ ಮೇಲೆ ಹೇಳಿದ 3 ಜನ ಮಕ್ಕಳು ಪ್ರಾಪ್ತ ವಯಸ್ಕರರು ಆಗಿರುತ್ತಾರೆ. ಈ ಮೇಲೆ ಹೇಳಿದ 3 ಜನ ಮಕ್ಕಳ ಆಧಾರ ಕಾರ್ಡಿನಲ್ಲಿ ಮತ್ತು ಪಾಸ ಪುಸ್ತಕದಲ್ಲಿ ನನ್ನ ಹೆಸರು ಮತ್ತು ಅಡ್ಡ ಹೆಸರು ಇರುವುದಿಲ್ಲ ಎಂದರೆ ಸಾಕ್ಷಿದಾರರು ಆಧಾರ ಕಾರ್ಡಿನಲ್ಲಿ ಮಾತ್ರ ನನ್ನ ಹೆಸರು ಇದ್ದು ಮತ್ತು ಉಳಿದ ದಾಖಲೆಗಳಲ್ಲಿ ನನ್ನ ಹೆಸರು ಇರುವುದಿಲ್ಲ ಎಂದು ಹೇಳುತ್ತಾರೆ. ಪರಶುರಾಮ, ಕಮಲಾಕ್ಷಿ ಮತ್ತು ಶೋಭಾ ರವರ ಆಧಾರ ಕಾರ್ಡನಲ್ಲಿ ನನ್ನ ಹೆಸರು ಇರುತ್ತದೆ. ಸದರಿ ಆಧಾರ ಕಾರ್ಡಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಆಧಾರ ಕಾರ್ಡಗಳನ್ನು ಯಾವಾಗ ಮಾಡಿಕೊಂಡಿರುತ್ತಾರೆ ಎಂದು ನೆನಪಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.